**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 509/2019**

**ಸಿ.ಡಬ್ಲ್ಯೂ- 11 ಪಿ.ಡಬ್ಲ್ಯೂ- 7**

| | | |
|---|---|---|
| ಸಾಕ್ಷಿದಾರರ ಹೆಸರು | : | ಪುರುಷೋತ್ತಮ್ |
| ತಂದೆಯ ಹೆಸರು | : | ಗೋಪಾಲಸ್ವಾಮಿ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಮುಖ್ಯ ಪೇದೆ |
| ವಾಸ ಸ್ಥಳ | : | ಮೈಸೂರು |

**ದಿನಾಂಕ 07.08.2026 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2017 ರಿಂದ 2018 ವರೆಗೂ ಬೀಚನಹಳ್ಳಿ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 06.09.2017 ರಂದು ಮೈಸೂರು ಜಿಲ್ಲಾದ್ಯಂತ ಬಿ ಜೆ ಪಿ ಯುವಮೂರ್ಚಾ ಘಟಕದವರು ಮಂಗಳೂರು ಚಲೋ ಶೀರ್ಷಿಕೆ ಅಡಿಯಲ್ಲಿ ಬೈಕ್ ರ್ಯಾಲಿ ಹಮ್ಮಿಕೊಂಡಿದ್ದು, ಯಾವುದೇ ರ್ಯಾಲಿ ಅಥವಾ ಪ್ರತಿಭಟನೆ ಮಾಡಬಾರದು ಎಂದು ಡಿಸಿ ಆದೇಶ ಇದ್ದರೂ ಸಹ ಆರೋಪಿತರು ಬೈಕ್ ರೈಡ್ ಹೋಗುತ್ತಿದ್ದರಿಂದ ಚಾಸಾ 23 ರವರು ನಮ್ಮನ್ನು ನೇಮಕ ಮಾಡಿರುತ್ತಾರೆ. ಅದನ್ನು ತಡೆಯಲು ಚಾಸಾ 1 ರವರನ್ನು ಮತ್ತು ಸಿಬ್ಬಂದಿಗಳನ್ನು ಠಾಣೆಯ ಮುಂದೆ ಬಂದೋಬಸ್ತ್ ಮಾಡಿಕೊಂಡು ರಸ್ತೆಗೆ ಬ್ಯಾರಿಕೇಡ್ ಅಳವಡಿಸಿ ಸುಮಾರು 11 ಗಂಟೆ

ಸಮಯದಲ್ಲಿ ಠಾಣಾ ಮುಂಬಾಗ ಇದ್ದಾಗ 30 ರಿಂದ 40 ಜನರು ಬಿ ಜೆ ಪಿ ಬಾವುಟಗಳನ್ನು ಹಿಡಿದುಕೊಂಡು ಹೆಚ್ ಡಿ ಕೋಟೆ ಬಸ್ ನಿಲ್ದಾಣದಿಂದ ಹುಣಸೂರು ಕಡೆಗೆ ಹೊಗಲು ಬಂದಾಗ ನಾವು ಅವರನ್ನು ತಡೆದಾಗ ಸರ್ಕಾರದ ವಿರುದ್ದ ಘೋಷಣೆ ಕೂಗಿರುತ್ತಾರೆ. ಆಗ ಸಿಬ್ಬಂದಿಗಳು ಸೇರಿ ಬೈಕ್ ರ್ಯಾಲಿಯನ್ನು ತೆಡದು ಡಿಸ ಆದೇಶವನ್ನು ತಿಳಿಸಿ ವಾಪಸ್ಸು ಹೋಗಲು ತಿಳಿಸಿರುತ್ತಾರೆ. ಆಗ ಬಿಜೆಪಿ ಕಾರ್ಯಕರ್ತರು ಬ್ಯಾರಿಕೇಡ್ ಅನ್ನು ತಳ್ಳಿ ಮಂದೆ ಹೋಗಲು ಪ್ರಯತ್ನಿಸಿದ್ದರಿಂದ ರ್ಯಾಲಿ ಹೋಗುತ್ತಿದ್ದ 30 ರಿಂದ 40 ಕಾರ್ಯಕರ್ತರು ಮತ್ತು 12 ಬೈಕ್ ಗಳನ್ನು ಅಮಾನತುಪಡಿಸಿಕೊಂಡಿರುತ್ತೇವೆ. ನಂತರ ಚಾಸಾ 1 ರವರು ಪ್ರಕರಣ ದಾಖಲಿಸಿರುತ್ತಾರೆ. ಸದರಿ ವಿಚಾರವಾಗಿ ಹೇಳಿಕೆ ಕೊಟ್ಟಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಸದರಿ ದಿನ ಹೆಚ್ ಡಿ ಕೋಟೆ ಪೋಲೀಸ್ ಠಾಣೆ ಮುಂಬಾಗ ಬೆಳಿಗ್ಗೆ 7 ಗಂಟೆಗೆ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜನೆ ಆಗಿದ್ದೆ. ಸುಮಾರು 20-25 ಮೀಟರ್ ಅಂತರದಿಂದ ಬೈಕ್ ರ್ಯಾಲಿ ಬರುವುದನ್ನು ನೋಡಿರುತ್ತೇನೆ. 11 ಬೈಕ್ ಳಗಲ್ಲಿ ಸುಮಾರು 30 ರಿಂದ 40 ಜನ ಬರುತ್ತಿದ್ದರು. 12 ಬೈಕ್ ಗಳ ನಂಬರ್ ಹೇಳಲು ಆಗುವುದಿಲ್ಲ. ಅವರುಗಳಲ್ಲಿ ಕೆಲವರ ಹೆಸರು ಮಾತ್ರ ಹೇಳುತ್ತೇನೆ. ಸದರಿ ಸಮಯದಲ್ಲಿ ವಾಹನಗಳು ಹೋಗದಂತೆ ಠಾಣೆ ಮುಂದೆ ಬ್ಯಾರಿಕೇಡ್ ಅಳವಡಿಸಿದ್ದೆವು ಎಂದರೆ ಸರಿ. ಆರೋಪಿತರು 11.30 ಕ್ಕೆ ಬಂದಿರುತ್ತಾರೆ. ಸದರಿ ದಿನ ಆರೋಪಿತರು ಮಂಗಳೂರು ಚಲೋ ಪ್ರತಿಭಟನೆಯಲ್ಲಿ ಭಾಗವಹಿಸಿರಲಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಕೋಸ್ಕರ ದಾಖಲಿದ ಪ್ರಕರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**